<u>ಜಾನುವಾರು ಸಾಗಾಣಿಕೆ  ಪರವಾನಿಗೆ.</u>

<u>ಜಾನುವಾರುಗಳ ಕಾನೂನು ಬದ್ಧ ಆನ್ ಲೈನ್ ಇ-ಪರ್ಮಿಟ್ ಸೇವೆ.</u>

<u>ವೆಬ್ ಸೈಟ್ ನಲ್ಲಿ **ಜಾನುವಾರು ಸಾಗಾಣಿಕೆ  ಪರವಾನಿಗೆ ಅರ್ಜಿ ಸಲ್ಲಿಸುವ ವಿಧಾನ**</u>

---

1 https://animaltrans.karahvs.in ವೆಬ್ ಸೈಟ್ ನಲ್ಲಿ ಈ ಕೆಳಗೆ ತಿಳಿಸಿದ **ಜಾನುವಾರು ಸಾಗಾಣಿಕೆ ಪರವಾನಿಗೆ ಅರ್ಜಿ** ಸಲ್ಲಿಸಲು ಕ್ಲಿಕ್ ಮಾಡಿ.




---

2. **ಮೊಬೈಲ್ ಸಂಖ್ಯೆಯನ್ನು ನಮೂದಿಸಿ** ಮತ್ತು **ಒಟಿಪಿ ಪಡೆಯಿರಿ'** ಆಯ್ಕೆಯ ಮೇಲೆ ಕ್ಲಿಕ್ ಮಾಡಿ. ನೀವು ನಮೂದಿಸಿದ ಮೊಬೈಲ್  ಸಂಖ್ಯೆಗೆ  ಒಟಿಪಿ ಬರುತ್ತದೆ.



*(ಅರ್ಜಿ ಸಲ್ಲಿಸುವಾಗ ಜಾನುವಾರು/ಗಳ, ಜಾನುವಾರು ಮಾಲಕರ ಭಾವಚಿತ್ರ ಇರುವ ಯಾವುದಾದರೊಂದು ಗುರುತಿನ ಚೀಟಿ , ಜಾನುವಾರುಗಳ ಕಿವಿಯೋಲೆ ಸಂಖ್ಯೆ , ಸಾಗಾಟ ಮಾಡಲು ಬಳಸುವ ವಾಹನದ ಫೋಟೋ , ವಾಹನದ ಆರ್. ಸಿ ಪ್ರತಿ ನಿಮ್ಮ ಮೊಬೈಲ್ /ಕಂಪ್ಯೂಟರ್ ನಲ್ಲಿ ಸಿದ್ದವಾಗಿ ಇಟ್ಟುಕೊಳ್ಳಿ .)*


---

3. ನಿಮ್ಮ ಮೊಬೈಲ್ ಸಂಖ್ಯೆಗೆ ಬಂದಿರುವ ಒಟಿಪಿಯನ್ನು '**ಒಟಿಪಿ ನಮೂದಿಸಿ**' ಆಯ್ಕೆಯ ಮೇಲೆ **ಒಟಿಪಿ ಹಾಕಿ.** ನಂತರ '**ಪರಿಶೀಲಿಸಿ ಮತ್ತು ಮುಂದುವರಿಸಿ**' ಆಯ್ಕೆಯ ಮೇಲೆ ಕ್ಲಿಕ್ ಮಾಡಿ.




---

4. ಪರಿಶೀಲಿಸಿ ಮತ್ತು ಮುಂದುವರಿಸಿ ಆಯ್ಕೆಯ ಮೇಲೆ ಕ್ಲಿಕ್ ಮಾಡಿದ ನಂತರ **ಜಾನುವಾರು ಸಾಗಾಟ ಪರವಾನಿಗೆ ಅರ್ಜಿ** ಇರುತ್ತದೆ. ಜಾನುವಾರು ಸಾಗಾಣಿಕೆಗೆ ಸಂಬಂಧಪಟ್ಟಂತೆ ಪಶುಪಾಲನಾ ಚಟುವಟಿಕೆ / ಕೃಷಿ / ಚಿಕಿತ್ಸೆ / ಎಪಿಎಂಸಿ / ಸಂಶೋಧನೆ / ಗೋಶಾಲೆ / ಜಾನುವಾರು ಜಾತ್ರೆ ಪ್ರದರ್ಶನ /ಕಸಾಯಿಖಾನೆ ಆಯ್ಕೆಗಳು ಇರುತ್ತದೆ. ನೀವು ಸಾಗಾಟ ಮಾಡುವ ಉದ್ದೇಶದ ಮೇಲೆ ಕ್ಲಿಕ್ ಮಾಡಿ .




---


## 5. ಸಾಗಾಟ ವಾಹನದ ಮಾಹಿತಿ ವಿವರಗಳು


- ಜಾನುವಾರು ಸಾಗಾಣಿಕೆ ಮಾಡುವ ವಾಹನದ ಸಂಖ್ಯೆಯನ್ನು ಹುಡುಕಿ ಆಯ್ಕೆ ಮಾಡುವುದು . ನಿಮ್ಮ ವಾಹನ ಸಂಖ್ಯೆ ಹೊಸದಾಗಿ ನೋಂದಾಯಿಸುವುದಾದರೆ '**ಹೊಸ ವಾಹನ ಸಂಖ್ಯೆ ಸೇರಿಸಿ**' ಎಂಬ ಆಯ್ಕೆಯ ಮೇಲೆ ಕ್ಲಿಕ್ ಮಾಡುವುದು.




- ಹೊಸ ವಾಹನ ಸಂಖ್ಯೆ ಸೇರಿಸಲು ಕ್ಲಿಕ್ ಮಾಡಿದ ನಂತರ **ಹೊಸ ವಾಹನ ನೋಂದಣಿ** ಎಂಬ ಅರ್ಜಿಯು ಇರುತ್ತದೆ. ಇದರಲ್ಲಿ ವಾಹನದ ಸಂಖ್ಯೆ , ವಾಹನ ಪ್ರಕಾರದ ಆಯ್ಕೆ , ಆರ್.ಸಿ ಪ್ರಕಾರ ವಾಹನ ಮಾಲಕರ ಹೆಸರು ಮತ್ತು ಆರ್.ಸಿ ಪ್ರಕಾರ ವಿಳಾಸವನ್ನು ಹಾಗೂ ಮೊಬೈಲ್ ಸಂಖ್ಯೆಯನ್ನು ತುಂಬಿರಿ . ಆರ್.ಸಿ ಭಾವಚಿತ್ರ ಹಾಗೂ ವಾಹನದ ಭಾವಚಿತ್ರವನ್ನು ಅಪ್ಲೋಡ್ ಮಾಡುವುದು. *( ನೀವು ಅಪ್ಲೋಡ್ ಮಾಡುವ ಛಾಯಾಚಿತ್ರ ಗಾತ್ರ ವು 512 KB ಗಿಂತ ಕಡಿಮೆ ಇರಬೇಕು )*

ಈ ಎಲ್ಲಾ ಕಾಲಂಗಳನ್ನು ತುಂಬಿದ ನಂತರ **ಉಳಿಸಿ** ಎಂಬ ಆಯ್ಕೆಯ ಮೇಲೆ ಕ್ಲಿಕ್ ಮಾಡಿ.







- ವಾಹನದ ಸಂಖ್ಯೆ ನಮೂದಿಸಿದ ನಂತರ ಚಾಲಕರ ಹೆಸರು, ಚಾಲಕರ ವಿಳಾಸ, ಚಾಲಕರ ಡ್ರೈವಿಂಗ್ ಲೈಸನ್ಸ್ ಸಂಖ್ಯೆಯನ್ನು ನಮೂದಿಸಿ.




---


## 6. ಜಾನುವಾರು ಮಾಲಕರ ವಿವರಗಳು :




- ಜಾನುವಾರು ಇರುವ ಜಿಲ್ಲೆಯನ್ನು ಆಯ್ಕೆ ಮಾಡುವುದು, ತಾಲೂಕು ಆಯ್ಕೆ ಮಾಡುವುದು, ಹೋಬಳಿ ಆಯ್ಕೆ ಮಾಡುವುದು ಮತ್ತು ಗ್ರಾಮ ಆಯ್ಕೆ ಮಾಡುವುದು.




- ಜಾನುವಾರು ಮಾಲಕರ  ಹೆಸರು, ವಿಳಾಸ, ಮೊಬೈಲ್ ಸಂಖ್ಯೆಯನ್ನು ತುಂಬಿರಿ. ಮತ್ತು ಜಾನುವಾರು ಮಾಲಕರ ಯಾವುದಾದರು ಗುರುತಿನ ಚೀಟಿಯನ್ನು ಅಪ್ಲೋಡ್ ಮಾಡುವುದು (ಪಾನ್ ಕಾರ್ಡ್, ಆಧಾರ್ ಕಾರ್ಡ್ ಇತ್ಯಾದಿ... ) *( ನೀವು ಅಪ್ಲೋಡ್ ಮಾಡುವ ಛಾಯಾಚಿತ್ರ ಗಾತ್ರ ವು 512 KB ಗಿಂತ ಕಡಿಮೆ ಇರಬೇಕು )*






---


## 7. ಜಾನುವಾರು ಮಾಹಿತಿ ತಿಳಿಸುವುದು:





- **ಜಾನುವಾರುಗಳ ಪ್ರಕಾರವನ್ನು** ಕ್ಲಿಕ್ ಮಾಡಿದಾಗ ದನ / ಹಸು / ಕರು ಮತ್ತು ಎತ್ತು / ಕೋಣ / ಎಮ್ಮೆ ಆಯ್ಕೆ ಇರುತ್ತದೆ. ಇದರಲ್ಲಿ ನೀವು ಸಾಗಾಟ ಮಾಡಲಿಚ್ಛಿಸುವ ಜಾನುವಾರು ಯಾವ ಪ್ರಕಾರ ಎಂಬುದನ್ನು ಆಯ್ಕೆ ಮಾಡಿ , ಸಾಗಾಣಿಕೆ ಮಾಡುವ **ಜಾನುವಾರು ತಳಿ** ಆಯ್ಕೆ ಮಾಡಿ .
- **ವ್ಯಾಕ್ಸಿನೇಷನ್** ಹೌದು ಅಥವಾ ಇಲ್ಲ ಎಂಬ ಆಯ್ಕೆ ಮೇಲೆ ಕ್ಲಿಕ್ ಮಾಡಿ.








ಜಾನುವಾರಿನ **ಇಯರ್ ಟ್ಯಾಗ್** ಅನ್ನು ನಮೂದಿಸಿ . ಹಾಗೂ **ಜಾನುವಾರು ಭಾವಚಿತ್ರ**ವನ್ನು ಅಪ್ಲೋಡ್ ಮಾಡಿ. ( ನೀವು ಅಪ್ಲೋಡ್ ಮಾಡುವ ಛಾಯಾಚಿತ್ರ ಗಾತ್ರ ವು 512 KB ಗಿಂತ ಕಡಿಮೆ ಇರಬೇಕು )





---


**8.** ಸಾಗಾಣಿಕೆ ವಾಹನದ **ಸಾಗಾಟ ಮಾರ್ಗ, ತಲುಪುವ ಸ್ಥಳ, ವ್ಯಕ್ತಿಯ ಹೆಸರು ಮತ್ತು ವಿಳಾಸ** ವನ್ನು ಭರ್ತಿ ಮಾಡಿರಿ..




- ಜಾನುವಾರು ತಲುಪುವ **ಜಿಲ್ಲೆ , ತಾಲ್ಲೂಕು , ಹೋಬಳಿ , ಗ್ರಾಮ** ಇವುಗಳನ್ನು ಆಯ್ಕೆ ಮಾಡಿರಿ.





- ಜಾನುವಾರು ಸಾಗಾಟ **ದಿನಾಂಕ ಮತ್ತು ಸಮಯ ,** ಜಾನುವಾರು ಸಾಗಾಟದ **ಅಂದಾಜು ಪ್ರಯಾಣದ ಅವಧಿ** ಆಯ್ಕೆ ಮಾಡಿರಿ ಹಾಗೂ ಜಾನುವಾರು ಸಾಗಾಟ **ವಾಹನವು ಯಾವ ಮಾರ್ಗದ** ಮೂಲಕ ಹಾದು ಹೋಗುತ್ತದೆ ಎಂಬುದನ್ನು ನಮೂದಿಸಿ.
  ಮತ್ತು **ಪ್ರಯಾಣದ ಕಿಲೋ ಮೀಟರ್** ಆಯ್ಕೆ ಮಾಡಿರಿ.
- ಅರ್ಜಿ ಸಲ್ಲಿಸುವಾಗ ಆಯ್ಕೆ ಮಾಡಿರುವ ಉದ್ದೇಶದ ಪ್ರಕಾರ ವಿವರಗಳನ್ನು ತುಂಬಿರಿ . ನಂತರ **ಸಲ್ಲಿಸಿ** ಎಂಬ ಆಯ್ಕೆಯ ಮೇಲೆ ಕ್ಲಿಕ್ ಮಾಡುವುದು.





**9.** ಸಾಗಾಟ ವಾಹನವು ಲಘು ವಾಹನವಾಗಿದ್ದು, ಪ್ರಯಾಣ 15 ಕಿಲೋಮೀಟರ್ ಗಿಂತ ಹೆಚ್ಚಾಗಿದ್ದರೆ ರೂಪಾಯಿ 25.00 ಮತ್ತು ತಗಲುವ GST ಮೊತ್ತ ಮತ್ತು ಘನ ವಾಗಿದ್ದು ಪ್ರಯಾಣ 15 ಕಿಲೋಮೀಟರ್ ಗಿಂತ ಹೆಚ್ಚಾಗಿದ್ದರೆ ರೂಪಾಯಿ 50.00 ಮತ್ತು ತಗಲುವ GST


ಮೊತ್ತ ಶುಲ್ಕ ಪಾವತಿಸುವ ಪೇಜ್ ( PAYMENT PAGE ) ತೆರೆದುಕೊಳ್ಳುತ್ತದೆ..




- ಶುಲ್ಕ ಪಾವತಿಸಿದ ನಂತರ ನೀವು ಹಾಕಿರುವ ಜಾನುವಾರು ಸಾಗಾಣಿಕೆ ಪರವಾನಿಗೆ ಅರ್ಜಿಯು ಯಶಸ್ವಿಯಾಗಿ ಸ್ವೀಕರಿಸಲಾಗಿದೆ ( your application for animal transport permit has been successfully Received and your payment for this permit is successful ) ಎಂಬ ಮೆಸೇಜ್ ನಿಮ್ಮ ಮೊಬೈಲ್ ಸಂಖ್ಯೆಗೆ ಬರುತ್ತದೆ .ಸಲ್ಲಿಸಿದ ಜಾನುವಾರು ಸಾಗಾಟ ಪರವಾನಿಗೆ ವಿವರಗಳು ಇಲ್ಲಿ ಕಾಣಬಹುದು. ನಂತರ **ಮುಕ್ತಾಯಗೊಳಿಸಿ** ಆಯ್ಕೆಯ ಮೇಲೆ ಕ್ಲಿಕ್ ಮಾಡಿ




- ಲಘು ಅಥವಾ ಘನ ವಾಹನವಾಗಿದ್ದು ಪ್ರಯಾಣದ ದೂರ 15 ಕಿಲೋಮೀಟರ್ ಗಿಂತ ಕಡಿಮೆ ಇದ್ದಲ್ಲಿ ಶುಲ್ಕ ಅನ್ವಹಿಸುವುದಿಲ್ಲ ಮತ್ತು ಉಚಿತವಾಗಿರುತ್ತದೆ. ನಮೂದಿಸಿರುವ ಮೊಬೈಲ್ ಸಂಖ್ಯೆಗೆ ನೀವು ಸಲ್ಲಿಸಿರುವ ಜಾನುವಾರು ಸಾಗಾಣಿಕೆ ಪರವಾನಿಗೆ ಅರ್ಜಿಯು ಯಶಸ್ವಿಯಾಗಿ ಸ್ವೀಕರಿಸಲಾಗಿದೆ ( your application for animal transport permit has been successfully Received and application fees is not applicable for this permit .) ಎಂಬ ಮೆಸೇಜ್ ನಿಮ್ಮ ಮೊಬೈಲ್ ಸಂಖ್ಯೆಗೆ ಬರುತ್ತದೆ. ಸಲ್ಲಿಸಿದ ಜಾನುವಾರು ಸಾಗಾಟ ಪರವಾನಿಗೆ ವಿವರಗಳು ಇಲ್ಲಿ ಕಾಣಬಹುದು. ನಂತರ ಮುಕ್ತಾಯಗೊಳಿಸಿ ಆಯ್ಕೆಯ ಮೇಲೆ ಕ್ಲಿಕ್ ಮಾಡುವುದು.






❖ ಶುಲ್ಕ ಪಾವತಿಸದೇ **Payment page** ನಿಂದ ಹಿಂತಿರುಗಿದರೆ ನೀವು ಅರ್ಜಿ ಸಲ್ಲಿಸುವಾಗ ನಮೂದಿಸಿರುವ ಮೊಬೈಲ್ ಸಂಖ್ಯೆಗೆ ( Your application for animal transport permit has been successfully submitted and the payment for this application is not yet completed) ಎಂಬ ಮೆಸೇಜ್ ನಿಮ್ಮ ಮೊಬೈಲ್ ಸಂಖ್ಯೆಗೆ ಬರುತ್ತದೆ. ( ಜಾನುವಾರು ಸಾಗಾಟ ಪರವಾನಿಗೆ ವಿವರಗಳು ನಿಮಗೆ ಕಾಣಲು ಆಗುವುದಿಲ್ಲ) ಮೊಬೈಲ್ ಸಂಖ್ಯೆ ಗೆ ಬಂದಿರುವ ಮೆಸೇಜ್ ನಲ್ಲಿ ಕಾಣುವ ಲಿಂಕ್ ನ ಮೇಲೆ ಕ್ಲಿಕ್ ಮಾಡಿ ಮುಂದಿನ ಪ್ರಕ್ರಿಯೆ ಯನ್ನು ಕೈಗೊಳ್ಳುವುದು


---


**10.** ಸಲ್ಲಿಸಿದ ಅರ್ಜಿಯಲ್ಲಿ ತಿದ್ದುಪಡಿ ಮಾಡಲು ಇದ್ದಲ್ಲಿ . ವೆಬ್ ಸೈಟ್ ನಲ್ಲಿ ಇರುವ ಈ ಕೆಳಗೆ ತೋರಿಸಿದ ಆಯ್ಕೆಯ ಮೇಲೆ ಕ್ಲಿಕ್ ಮಾಡಿ, ನಿಮ್ಮ ಮೊಬೈಲ್ ಸಂಖ್ಯೆಯನ್ನು ನಮೂದಿಸಿ , ಓ. ಟಿ .ಪಿ ಹಾಕಿ **ಪರವಾನಿಗೆ ತಿದ್ದಿ** ಆಯ್ಕೆ ಮಾಡಿ , ಬದಲಾವಣೆ ಮಾಡಿದ ನಂತರ ಮರು **ಸಲ್ಲಿಸಿ** ಮೇಲೆ ಆಯ್ಕೆ ಮಾಡಿ.

( ಅರ್ಜಿಯಲ್ಲಿ ಬದಲಾವಣೆ ಮಾಡಲು ವೈದ್ಯಾಧಿಕಾರಿಗಳು Approve /Reject ಮಾಡುವ ಹಂತದ ವರೆಗೆ ಮಾತ್ರ ಅವಕಾಶ ಇರುತ್ತದೆ.)





---

**11.** ವೆಬ್ ಸೈಟ್ ಮುಖಪುಟದಲ್ಲಿ ಕೆಳಗೆ "24 ಗಂಟೆಗಳ ಪ್ರಾಣಿ ಕಲ್ಯಾಣ ಸಹಾಯವಾಣಿ " ಸಂಖ್ಯೆ ಇರುತ್ತದೆ. ನೀವು ಅರ್ಜಿ ಹಾಕುವಾಗ ಏನಾದರೂ ಸಮಸ್ಯೆ ಆದಲ್ಲಿ ಈ ನಂಬರಿಗೆ ಕಾಲ್ ಮಾಡಿ.

